ಶ್ರೀ ಕೆ. ಪೆಚ್. ಕುರುಡಗಿ:- ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎರಡನೇ ಪ್ರಶ್ನೆಗೆ ತುಂಗಭದ್ರಾ ನದಿಯಿಂದ ನೀರು ಸಪ್ಲೈ ಮಾಡತಕ್ಕ ಯೋಜನೆ ಇದೆ ಎಂದು ಹೇಳಿದ್ದೀರಿ. ಇದು ಎಷ್ಟು ವರ್ಷಗಳಲ್ಲಿ ಆಗಬಹುದು?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರತಕ್ಕದ್ದು ಪ್ರಸ್ತುತ ಅಲ್ಲಿ ಏನು ನೀರು ಸರಬರಾಜಿನ ಸೌಲಭ್ಯ ಇದೆ ಅದು ಉತ್ತಮವಾಗಿಲ್ಲ ಎಂದು ಮಾನ್ಯ ಸದಸ್ಯರು ಅನೇಕಸಾರಿ ನನ್ನ ಗಮನಕ್ಕೆ ತಂದಿದ್ದಾರೆ. ಈ ತೋಟಗಾರಿಕೆ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡತಕ್ಕ ಕಾರ್ಯಕ್ರಮ ೧೯೯೨-೯೩ನೇ ಸಾಲಿನಲ್ಲಿ ಜಿಲ್ಲಾ ಪಲಯದವರಿಗೆ ಆದೇಶ ನೀಡಿ ಇದನ್ನು ಕಾರ್ಯಗತ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪೆಚ್. ಕುರುಡಗಿ:- ೩ನೇ ಪ್ರಶ್ನೆಯಲ್ಲಿ ಸಿಂಗಟನ ಕೆರೆಯಲ್ಲಿ ಸರ್ಕಾರಿ ಫಾರಂ ಮಾಡುತ್ತಿದ್ದಿರಾ ಎಂದು ನಾನು ಕೇಳಿರುವುದಕ್ಕೆ ಸದ್ಯಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಈಗ ಅಲ್ಲಿ ಸರ್ಕಾರಿ ಜಮೀನು ಇರುವುದರಿಂದ ಗದಗಿನ ಏರಿಯ ಕಡಿಮೆ ಇರುವುದರಿಂದ ಅಲ್ಲಿ ಹೊಸ ಫಾರಂ ಮಾಡಿದರೆ ತುಂಗಭದ್ರಾ ನೀರು ಅಲ್ಲಿಗೆ ಬರುವುದರಿಂದ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತದೆ. ಗದಗ್ ಮತ್ತು ಮುಂಡರಗಿಯಲ್ಲಿ ರೈತರಿಗೆ ಬಹಳ ತೊಂದರೆ ಇದೆ. ಆದುದರಿಂದ ತಾವು ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರಗಳನ್ನು ಅವಶ್ಯಕತೆಗನುಗುಣವಾಗಿ ಮಾಡಬೇಕೆಂದು ಇಲಾಖೆಯಲ್ಲಿ ಇರತಕ್ಕದ್ದು. ಮಾನ್ಯ ಸದಸ್ಯರು ಹೇಳುವಂತೆ, ರೈತರಿಗೆ ಅವಶ್ಯಕತ ಇದ್ದರೆ ಸೂಕ್ತವಾದ ಜಮೀನನ್ನು ಒದಗಿಸಿಕೊಟ್ಟರೆ ಆಥವಾ ನಮಗೆ ಸೂಕ್ತವಾದ ಜಮೀನು ದೊರೆತರೆ ೯೨-೯೩ನೇ ಸಾಲಿನಲ್ಲಿ ಈ ಫಾರಂನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಕುರುಡಗಿ:- ಅಲ್ಲಿ ಸರ್ಕಾರಿ ಜಮೀನು ಸಾಕಷ್ಟಿದೆ. ಗೋಮಾಳದ ಜಾಗ ಇದೆ. ಸರ್ಕಾರದವರು ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗಿಲ್ಲ. ಆದುದರಿಂದ ಇದನ್ನು ತಾವು ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:- ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಹಾಲು ಮತ್ತು ಹಾಲು ಉತ್ಪನ್ನಗಳಿಗೆ ಬೇಡಿಕೆ

೩೫೨ (೧೪೩೦)ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಪಶುಸಂಗೋಪನ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ನಗರಕ್ಕೆ ಬರುವ ಮತ್ತು ಮಾರಾಟವಾಗುತ್ತಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಅಂಕಿ-ಅಂಶಗಳನ್ನು ಸರ್ಕಾರ ಸಂಗ್ರಹಿಸಿದೆಯೇ; ಇದ್ದಲ್ಲಿ ಚಿಕ್ಕಮಗಳೂರು ನಗರದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ

ಇರುವ ಬೇಡಿಕೆ ಪ್ರಮಾಣವೆಷ್ಟು;

ಆ) ಕೆ. ಎಂ. ಎಫ್. ವತಿಯಿಂದ ಹಾಸನ ಅಥವಾ ಶಿವಮೊಗ್ಗ ಡೈರಿ ವ್ಯಾಪ್ತಿಯಲ್ಲಿ ಚಿಕ್ಕಮಗಳೂರು ನಗರದಲ್ಲಿ ಹಾಲು ಶೇಖರಣಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇ) ಈ ಬೇಡಿಕೆಯು ಕಳೆದ ಹಲವಾರು ವರ್ಷಗಳಿಂದ ಇರುವುದರಿಂದ ಸರ್ಕಾರ ಇದನ್ನು ಆದ್ಯತೆ ಮೇರೆಗೆ ಪ್ರಾರಂಭಿಸುವುದು ಸೂಕ್ತವಲ್ಲವೇ?

ಶ್ರೀ ಬಸವರಾಜ ಪಾಟೀಲ (ಪಶುಸಂಗೋಪನಾ ಮತ್ತು ಪಶು ವೈದ್ಯ ಸೇವೆ ಸಚಿವರು).

ಆ) ಇಲ್ಲ. ಬೇಡಿಕೆಯ ಅಂದಾಜು ದಿನಂಪ್ರತಿ ೨೧,೨೫೦ ಲೀಟರ್‌ಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್:- ಮಾನ್ಯ ಉಪಾಧ್ಯಕ್ಷೀಣಿಯವರೆ, ಚಿಕ್ಕಮಗಳೂರಿನ ಸುತ್ತಮುತ್ತ ಇರತಕ್ಕ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಹಾಲಿನ ಮಾರಾಟದ ಬಗ್ಗೆ ಬಹಳ ತೊಂದರೆಯಾಗಿದೆ. ಮಿಲ್ಕ್ ಮತ್ತು ಮಿಲ್ಕ್ ಪ್ರಾಡಕ್ಟ್ಸ್‌ನ ಅಂಕಿಅಂಶಗಳನ್ನು ನೀವೇನಾದರೂ ಕಲೆಕ್ಟ್ ಮಾಡಿದ್ದೀರಾ ಎಂದು ನಾನು ಕೇಳಿರುವ ಪ್ರಶ್ನೆಗೆ 'ಇಲ್ಲ' ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮತ್ತು ಹಾಲಿನ ಬೇಡಿಕೆ ಚಿಕ್ಕಮಗಳೂರು ಪಟ್ಟಣದಲ್ಲಿ ಎಷ್ಟಿದೆ ಎಂದರೆ ೨೧,೨೫೦ ಲೀಟರ್ ಎಂದು ಹೇಳಿದ್ದಾರೆ. ಇದರ ಜೊತೆಗೆ ಮಿಲ್ಕ್ ಕಲೆಕ್ಷನ್ ಸೆಂಟರನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ ಹಾಸನ ಮತ್ತು ಶಿವಮೊಗ್ಗ ಡೈರಿ ವ್ಯಾಪ್ತಿಯಲ್ಲಿ ಕೆ. ಎಂ. ಎಫ್. ನ ಒಂದು ಶಾಖೆಯನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡಲಿಕ್ಕೆ ಸಾಧ್ಯವೆ ಎಂದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ದಿನಕ್ಕೆ ೨೧,೨೫೦ ಲೀಟರ್ ಹಾಲು ಬೇಕಾಗಿದೆ ಎಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ಇವತ್ತು ಸರ್ಕಾರ ಹಾಕಿಕೊಂಡಿರುವ ಅನೇಕ ಕಾರ್ಯಕ್ರಮಗಳಿಂದಾಗಿ ಅನೇಕ ಜನ ರೈತರು ಹಸುಗಳನ್ನು ಸಾಕಿರುವುದು ತಮಗೆಲ್ಲ ಗೊತ್ತಿರುವ ವಿಚಾರ. ಆದ್ದರಿಂದ ಇವತ್ತು ಕೆ. ಎಂ. ಎಫ್.ನ ಒಂದು ಬ್ರಾಂಚನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ಹೇಳಬೇಕು. ಅದರ ಜೊತೆಗೆ ಬಹುಶಃ ಹಾಸನ ಮತ್ತು ಶಿವಮೊಗ್ಗ ಕೆ. ಎಂ. ಎಫ್.ನ ಶಾಖೆ ದೂರವಾಗುತ್ತದೆ, ಅಲ್ಲಿ ನಾವು ಮಾಡಲಿಕ್ಕೆ ಬರುವುದಿಲ್ಲವೆಂದು ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಹಿಂದೆ ಎನ್. ಆರ್. ಪುರ ತಾಲ್ಲೂಕಿನ ಬಾಳೆಹಣ್ಣೂರು ಗ್ರಾಮದಲ್ಲಿ ಒಂದು ಮಿಲ್ಕ್ ಕಲೆಕ್ಷನ್ ಬ್ಯಾಂಚ್ ಮಾಡಿದ್ದರು. ಆದನ್ನು ಈಗ ಮುಚ್ಚಿದ್ದಾರೆ. ಅದನ್ನೇ ಚಿಕ್ಕಮಗಳೂರು ಪಟ್ಟಣಕ್ಕೆ ಏಕೆ ವರ್ಗಾಯಿಸಕೂಡದು ಎಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಮಾನ್ಯ ಸದಸ್ಯರು ಚಿಕ್ಕಮಗಳೂರಿನಲ್ಲಿ ಹಾಲು ಎಷ್ಟು ಶೇಖರಣೆಯಾಗುತ್ತದೆ ಎಂದು ಕೇಳಿದ್ದಾರೆ. ಅಲ್ಲಿ ನಮ್ಮದು ಯಾವುದೂ ಸೆಂಟರ್ ಇಲ್ಲ. ಅದಕ್ಕಾಗಿ ನಾನು ಮಾಹಿತಿಯನ್ನು ಒದಗಿಸಿಲ್ಲ. ೨೧ ಸಾವಿರ ಲೀಟರ್ ಹಾಲು ಬೇಕಾಗುತ್ತದೆ ಎಂದು ಯಾವ

ಆಧಾರದ ಮೇಲೆ ಹೇಳಿದಯೆಂದರೆ ಜನಸಂಖ್ಯೆ ಆಧಾರದ ಮೇಲೆ ಹೇಳಿದೆ. ಪ್ರತಿಯೋಬ್ಬರಿಗೆ ಅಂದರೆ ಒಂದು ತಲೆಗೆ ೨೫೦ ಮಿಲಿ ಲೀಟರ್ ಹಾಲು ಬೇಕಾಗುತ್ತದೆ. ಆ ಪ್ರಕಾರ ೨೧ ಸಾವಿರ ಲೀಟರ್ ಹಾಲು ಇವತ್ತು ಒದಗಿಸಬೇಕಾಗುತ್ತದೆ. ಆ ಆಧಾರದ ಮೇಲೆ ತಮಗೆ ಮಾಹಿತಿ ಒದಗಿಸಲಾಗಿದೆ. ಈಗ ತಾವು ಕೇಳಿದಿರಿ. ಬೇರೆ ಕಡೆ ಎಲ್ಲೋ ಒಂದು ಹಾಲಿನ ಸೆಂಟರ್ ಇದೆ. ಅದನ್ನು ಈಗಾಗಲೇ ಮುಚ್ಚಲಾಗಿದೆ. ಅದನ್ನು ಚಿಕ್ಕಮಗಳೂರಿಗೆ ವರ್ಗಾಯಿಸಿದರೆ ಒಳ್ಳೆಯಾದಾಗುತ್ತದೆಂದು ತಾವು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಚಿಕ್ಕಮಗಳೂರಿನಲ್ಲಿ ಎಷ್ಟು ಹಾಲು ಕೂಡಿಸಲಿಕ್ಕೆ ಸಾಧ್ಯವಿದೆಯೋ ಮತ್ತು ಅಲ್ಲಿ ಯಾವ ರೀತಿಯಾಗಿ ಹಾಲು ಶೇಖರಣೆಯಾಗುತ್ತದೆ. ಸೊಸೈಟಿ ಅಥವಾ ಬೇರೆ ಕಡೆಯಿಂದ ಹಾಲನ್ನು ಕೂಡಿಸುವ ಪ್ರಮಾಣದ ಆಧಾರದ ಮೇಲೆ ಯಾವ ರೀತಿ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿ ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಒದಗಿಸಿಕೊಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ವಾಡಿ ಪಟ್ಟಣದ ಮೇಲೆ ಬೀಳುವ ಸಿಮೆಂಟ್ ಧೂಳಿಗೆ ತಡೆ.

೩೫೩ (೧೯೮೨) ಶ್ರೀ ಬಾಬುರಾವ್ ಚವಾಣ್ (ಶಹಬಾದ್):- ಸನ್ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ವಾಡಿ ಪಟ್ಟಣದಲ್ಲಿರುವ ಎ. ಸಿ. ಸಿ. ಕಾರ್ಖಾನೆಯು ರಾತ್ರಿ ವೇಳೆಯಲ್ಲಿ ತನ್ನ ಧೂಳನ್ನು ವಾಡಿ ಪಟ್ಟಣದ ಮೇಲೆ ಬೀಳಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

೨) ಈ ವಿಷಯದ ಬಗ್ಗೆ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

೩) ಇದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು):-

೧) ಬಂದಿದೆ.

೨) ಬಂದಿಲ್ಲ.

೩) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೮೧ನ್ನು ರಾಜ್ಯದಲ್ಲಿ ೧೯೮೪ರಿಂದ ಅನುಷ್ಠಾನಗೊಳಿಸುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಿಮೆಂಟ್ ಕಾರ್ಖಾನೆಗಳಿಂದ ಹೊರ ಬರುವ ಧೂಳಿನ ಗುಣಮಾನಕಗಳ ಮಿತಿಯನ್ನು ಮೀರದಿರಲು ಸೂಕ್ತ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು ಕಾರ್ಖಾನೆಗೆ ಆದೇಶ ನೀಡಲಾಗಿದೆ. ಈ ಕಾರ್ಖಾನೆಯು, ಮಂಡಳಿಯು ನಿರ್ದೇಶಿಸಿದಂತೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಘಟಕಗಳನ್ನು ಅಳವಡಿಸದೆ ಇದ್ದ ಕಾರಣ ಮತ್ತು ಧೂಳಿನ ಪ್ರಮಾಣವು ಮಂಡಳಿಯು ನಿರ್ದೇಶಿಸಿದ ಗುಣಮಾನಕಗಳ ಮಿತಿಗಿಂತ ಹೆಚ್ಚಾಗಿರುತ್ತಿದ್ದ